ಓ ಎಸ್ ನಂ.34/2023
ಡಿ.ಡಬ್ಲ್ಯೂ-3 ಶಾಂತಮಲ್ಲ ತಂದೆ ಚಂದ್ರಶಾ ನಂದರ್ಗಿ

**(ಇಂದು ದಿನಾಂಕಃ 10-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎನ್ ಪಿ ವಕೀಲರಿಂದ.

ಅಂಬರಾಯರವರಿಗೆ ನಿಂಗಪ್ಪ ಮತ್ತು ಸೋಮನಾಥ ಎಂಬ ೨ ಜನ ಗಂಡು ಮಕ್ಕಳು ಮತ್ತು ಮಹಾದೇವಿ ಎಂಬ ಹೆಣ್ಣುಮಗಳು ಇರುತ್ತಾರೆ. ವಾದಿ ನಿಂಗಪ್ಪ ಕಲಬುರಗಿಯಲ್ಲಿ ವಾಸವಿರುತ್ತಾರೆ. ವಾದಿ ನಿಂಗಪ್ಪರವರು ಕಲಬುರಗಿಯಲ್ಲಿ ನೌಕರಿ ಮಾಡುತ್ತಾರೆ. ೧ನೇ ಪ್ರತಿವಾದಿ ಸೋಮನಾಥರವರು ಕೊಗನೂರ ಗ್ರಾಮದಲ್ಲಿರುತ್ತಾರೆ. ೧ನೇ ಪ್ರತಿವಾದಿ ಎಲ್ಲ ಜಮೀನುಗಳನ್ನು ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ತನ್ನ ಪಾಲಿನ ಜಮೀನನ್ನು ತಾನು ನೋಡಿಕೊಳ್ಳುತ್ತಾನೆ ಎನ್ನುತ್ತಾರೆ. ವಾದಿ ಮತ್ತು ೧ನೇ ಪ್ರತಿವಾದಿಯ ನಡುವೆ ಸುಮಾರು ೪೦-೫೦ ವರ್ಷಗಳ ಹಿಂದೆ ವಿಭಾಗವಾಗಿರುತ್ತವೆ.

೨. ೧ನೇ ಪ್ರತಿವಾದಿ ಸೋಮನಾಥರವರಿಗೆ ಸರ್ವೆ ನಂಬರ ೩೦ ಮತ್ತು ೩೧ ಜಮೀನುಗಳು ಪಾಲಿಗೆ ಬಂದಿರುತ್ತವೆ. ವಾದಿ ನಿಂಗಪ್ಪರವರಿಗೆ ಸರ್ವೆ ನಂಬರ ೧೦೦ ರ ಜಮೀನು ಪಾಲಿಗೆ ಬಂದಿರುತ್ತದೆ. ಸದರಿ ಪಾಲು ಆದ ಕುರಿತು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ವಾದಿಯ ಹೆಸರಿನಲ್ಲಿ ಸರ್ವೆ ನಂಬರ ೧೦೦ ರ ಜಮೀನು ಇರುವ ಕುರಿತು ಪಹಣಿಯನ್ನು ನಾನು ನೋಡಿರುವುದಿಲ್ಲ. ಸರ್ವೆ ನಂಬರ ೧೦೦ ರ ಜಮೀನು ವಾದಿಯ ಪಾಲಿಗೆ ಬಂದ ಕುರಿತು ನಮ್ಮ ಜಮೀನಿನ ಪಕ್ಕದಲ್ಲಿ ಸದರಿ ಜಮೀನು ಇರುವುದರಿಂದ ನಾನು ಹೇಳುತ್ತಿದ್ದೇನೆ. ಸದರಿ ಸರ್ವೆ ನಂಬರ ೧೦೦ ಒಟ್ಟು ೧೧ ಎಕರೆ ಜಮೀನು ಇರುತ್ತದೆ. ಸದರಿ ಜಮೀನು ವಾದಿ ನಿಂಗಪ್ಪರವರು ಮಾರಾಟ ಮಾಡಿರುತ್ತಾರೆ.

೩. ವಾದಿ ನಿಂಗಪ್ಪರವರು ಸುಮಾರು ೪೦ ವರ್ಷಗಳ ಹಿಂದೆ ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸಾಕ್ಷಿಯು ವಾದಿ ವಿಭಾಗವಾದ ನಂತರ ಸದರಿ ಜಮೀನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ವಾದಿ ಕಲಬುರಗಿಯ ೨-೩ ಜನಕ್ಕೆ ಸದರಿ ಜಮೀನು ಮಾರಾಟ ಮಾಡಿದ್ದು, ಅವರ ಹೆಸರು ನನಗೆ ಹೇಳಲು ಗೊತ್ತಿಲ್ಲ. ವಾದಿಯ ತಂದೆ ಅಂಬರಾಯ ಮತ್ತು ಬಸಪ್ಪ ಗೊತ್ತು. ಅಂಬರಾಯ ಮತ್ತು ಬಸಪ್ಪರವರಿಗೆ ಯಾವ ಜಮೀನುಗಳು ಪಾಲಿಗೆ ಬಂದಿವೆ ಎಂದು ನನಗೆ ಗೊತ್ತು. ಬಸಪ್ಪರವರಿಗೆ ಸರ್ವೆ ನಂಬರ ೧೦೭ ರ ೧೧ ಎಕರೆ ಜಮೀನು ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ ೧೦೦ ರಲ್ಲಿ ಅಂಬರಾಯರವರಿಗೆ ೧೧ ಎಕರೆ ಜಮೀನು ಪಾಲಿಗೆ ಬಂದಿತ್ತು. ಬಸಪ್ಪ ಮತ್ತು ಅಂಬರಾಯರವರು ೧೯೭೨ ರ ಹಿಂದೆ ವಿಭಾಗವಾಗಿರುತ್ತಾರೆ. ಆ ಕುರಿತು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಊರಿನ ಪಂಚರು ಬಸಪ್ಪ ಮತ್ತು ಅಂಬರಾಯರವರಿಗೆ ಪಾಲು ಮಾಡಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಚಿಕ್ಕವನಿದ್ದೆ.

೪. ಕಲಬುರಗಿಯಲ್ಲಿ ವಾದಿ ನಿಂಗಪ್ಪರವರಿಗೆ ಮನೆ ಇದ್ದ ಬಗ್ಗೆ ಕೇಳಿರುತ್ತೇನೆ, ಆದರೆ ನಾನು ಅದನ್ನು ನೋಡಿರುವುದಿಲ್ಲ. ನನ್ನನ್ನು ೧ನೇ ಪ್ರತಿವಾದಿ ಸೋಮನಾಥರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆಗೆ ೧ನೇ ಪ್ರತಿವಾದಿ ವಿಷಯಗಳನ್ನು ತಿಳಿಸಿರುತ್ತಾರೆ. ವಾದಿ ಪಾಲು ಬೇಕು ಎಂದು ಈ ದಾವೆ ಹಾಕಿರುತ್ತಾರೆ. ವಾದಿ ಈ ದಾವೆಯನ್ನು ಸರ್ವೆ ನಂಬರ ೧೦೦ ರ ಕುರಿತು ಹಾಕಿದ ಕುರಿತು ಮಾತ್ರ ನನಗೆ ಗೊತ್ತು, ಅದನ್ನು ಬಿಟ್ಟು ನನಗೆ ಉಳಿದದ್ದು ಗೊತ್ತಿಲ್ಲ. ವಾದಿ ತನ್ನ ಪಾಲಿನ ಜಮೀನನ್ನು ಮಾರಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಬರಾಯರವರ ಮಕ್ಕಳಾದ ವಾದಿ ಮತ್ತು ೧ನೇ ಪ್ರತಿವಾದಿ ನಡುವೆ ಯಾವುದೆ ಪಾಲು ಆಗದೆ ಇದ್ದರೂ ನಾನು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ೧ನೇ ಪ್ರತಿವಾದಿಗೆ

ಸಹಾಯ ಮಾಡಲು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.